ಹಚ್ಚಿದಳು. ಅವನೋ ಕಣ್ಣು ಮುಚ್ಚಿ ಮಲಗೇ ಇದ್ದ. ಕಲ್ಲು ಕಂಬಕ್ಕೆ ಕುಂಕುಮ ಹಚ್ಚುವುದಕ್ಕೂ, ಇವನಿಗೆ ಹಚ್ಚುವುದಕ್ಕೂ ಹೆಚ್ಚು ವ್ಯತ್ಯಾಸ ತೋರಲಿಲ್ಲ. ಡಾಕ್ಟರು ಇವತ್ತು ಬರುವುದಿಲ್ಲ ಅಂತ ಬೇರೆ ಹೇಳಿದ್ದರಲ್ಲ. ಊಟದ ಶಾಸ್ತ್ರ ಮುಗಿಸಿ ಮಗನ ಪಕ್ಕದಲ್ಲೇ ಮತ್ತೆ ಮಂತ್ರಗಳನ್ನು ಹೇಳಿಕೊಳ್ಳುತ್ತಾ ಕುಳಿತೆ. ಇನ್ನೂ ಸಿಟ್ಟು ಒಳಗೆ ಕುದಿಯುತ್ತಲೇ ಇತ್ತು. ''ನಿನ್ನ ಸ್ತುತಿ ಅಂದುಕೊಳ್ಳಬೇಡ, ನನ್ನ ರೂಢಿ ಅಂತ ಹೇಳಿಕೊಳ್ಳುತ್ತಿದ್ದೇನೆ'' ಅಂದುಕೊಂಡೇ ಆ ಮಂತ್ರಗಳನ್ನು ಮನಸಿನಲ್ಲೇ ಹೇಳಿಕೊಳ್ಳುತ್ತಾ ಅಲ್ಲೇ ಓಡಾಡುವುದು, ಮತ್ತೆ ಕೂರುವುದು... ಹೀಗೇ ಮಾಡುತ್ತಾ ಸಂಜೆಯಾಯಿತು.

ಪ್ರಹ್ಲಾದನ ಜ್ವರ ಇಳಿಯುವ ಲಕ್ಷಣವೇ ಇಲ್ಲ. ಇವಳು ಬಿಸಿಯಾಗಿ ಗಂಜಿ ಮಾಡಿಕೊಂಡು ಬಂದು ಒತ್ತಾಯದಿಂದ ಮಗನನ್ನೆಬ್ಬಿಸಿ ಕುಡಿಸಿದಳು. ಅವನೋ ಶಿಶುಮಕ್ಕಳಂತೆ ಅದನ್ನು ಕುಡಿದು ಮತ್ತೆ ಕಣ್ಣು ಮುಚ್ಚಿದ. ಮೈ ಮೇಲೆ ಅವನಿಗೆ ಎಚ್ಚರವೇ ಇಲ್ಲ. ನಿಟ್ಟುಸಿರು ಬಿಟ್ಟು ಹೊರಬಂದೆ. ಎಲ್ಲವೂ ಪ್ರಾಯಶಃ ವ್ಯರ್ಥ ಎನ್ನಿಸಿತು. ನರಸಿಂಹನ ಗುಡಿಯ ಹೊರಗೆ ಹಚ್ಚಿದ ದೀಪ ನಮ್ಮ ಮನೆಯ ಹೊರಗಡೆಯಿಂದ ಕಾಣುತ್ತದೆ. ಅದು ವಿದ್ಯುದ್ದೀಪಗಳ ಕಾಲವಲ್ಲ. ಎಲ್ಲೆಡೆ ಕತ್ತಲು ಮುಸುಕಿದ ಊರ ಹೊರಬಯಲಿನಲ್ಲಿ ಅದೊಂದೇ ದೀಪ ಕಾಣುತ್ತಿದ್ದುದು – ಆಕಾಶದಲ್ಲಿ ನಕ್ಷತ್ರ ಕಾಣುವಂತೆ. ಅಷ್ಟೇ ಚಿಕ್ಕದಾಗಿ. ಅದನ್ನೇ ನಿಟ್ಟಿಸುತ್ತಾ ಕುಳಿತೆ. ಹಿಂದೆಯೂ ಅದೆಷ್ಟೋ ಸಲ ಅದನ್ನು ನೋಡುತ್ತಾ ಎಷ್ಟೋ ಹೊತ್ತು ಸುಮ್ಮನೆ ಕೂತಿದ್ದಿದೆ. ಘಂಟೆಗಟ್ಟಲೆ ಧ್ಯಾನಕ್ಕಿಂತ ವೇಗವಾಗಿ ಯಾವುದೋ ಒಂದು ಅಮೂರ್ತ ಬಿಂದುವಿನಲ್ಲಿ ನನ್ನನ್ನು ನಿಲ್ಲಿಸಿಬಿಡುವ ದೃಶ್ಯ ಅದು.

ಎಷ್ಟೋ ದಿನಗಳಿಂದ ಸರಿಯಾಗಿ ನಿದ್ದೆಯಿಲ್ಲದೆ ದೇಹ ದಣಿದಿತ್ತು. ''ಆದದ್ದಾಗಲಿ, ಇವತ್ತು ಮಲಗಿಬಿಡುತ್ತೇನೆ'' ಎಂದು ಎದ್ದೆ. ಹುಡುಗನಿಗೆ ಮತ್ತೊಂದೆರಡು ಸಲ ತಣ್ಣೀರು ಪಟ್ಟಿ ಹಾಕಿದೆ. ಹೊದಿಕೆ ಸರಿಪಡಿಸಿದೆ. ಕೋಣೆಯ ಇನ್ನೊಂದು ಮೂಲೆಯಲ್ಲಿ ಚಾಪೆ ಹಾಸಿಕೊಂಡು ಮುದುರಿ ಮಲಗಿದೆ. ಅದೆಲ್ಲಿದ್ದಿತೋ ನಿದ್ರೆ, ತಳ್ಳಿಕೊಂಡು ಬಂದಂತೆ ನನ್ನನ್ನು ಎತ್ತಲೋ ಬೀಸಿ ಒಗೆದಂತೆ... ಮಹಾಘನವಾದ ನಿದ್ರೆಯೊಂದು ಪ್ರವಾಹದಂತೆ ಬಂದು ನನ್ನನ್ನು ತಬ್ಬಿಕೊಂಡು ಬಿಟ್ಟಿತು. ಮೈ ಮನಗಳನ್ನು ಕಳಚಿಕೊಂಡು ಎಲ್ಲೋ ಹೋಗಿಬಿಟ್ಟಿದ್ದೇನೆ.

ಮಧ್ಯರಾತ್ರಿಯೂ ದಾಟಿ ಮೂರ್ನಾಲ್ಕು ಗಂಟೆ ಆಗಿರಬೇಕು, ಅಂದುಕೊಳ್ಳುತ್ತೇನೆ. ನಮ್ಮ ಮನೆದೇವರು ನರಸಿಂಹ ನಿಧಾನವಾಗಿ ಪ್ರಕಟಗೊಳ್ಳತೊಡಗಿದ. ಅದೇ ಆ ಉಗ್ರಸ್ವರೂಪ, ಅದರೊಳಗೆ ಅವನ ಶ್ರೀಶಾಂತ ವಿಷ್ಣುಸ್ವರೂಪ, ಸರ್ವತೋಮುಖವಾಗಿ ಜ್ವಲಂತವಾಗಿ ಉರಿಯುವ ದೀಪದಂಥ ಅವನ ಸನ್ನಿಧಾನ... ಕಣ್ಣು ಬಾಯಿ ಬಿಟ್ಟುಕೊಂಡು ನೋಡತೊಡಗಿದೆ. ಅವನ ಆ ಘನಗಾಂಭೀರ್ಯದ ಮಹಾಕಾರಕ್ಕೆ ತಕ್ಕ ಮೊಳಗುವ ಕಂಠಧ್ವನಿ ಅವನದು, ಅದೇ ಹೊತ್ತಿಗೆ ಮೃದುವೆನಿಸುವಂತೆಯೂ ಇತ್ತು. ಹೇಳಿದ: ''ನಿನ್ನ ಮಗನಿಗೆ ಗುಣವಾಗುತ್ತದೆ. ಆದರೆ, ಇವತ್ತು ಬೆಳಗ್ಗೆ ನೀನು ನನ್ನನ್ನು ಬೈದಿದ್ದು ತಪ್ಪು.'' ಕೊನೆಯ ಮಾತುಗಳನ್ನು ಹೇಳುವಾಗ ಧ್ವನಿ ಕಟುವಾಗಿತ್ತು. ಆದರೂ ಅದು ಕಠೋರ ಅನ್ನಲಾರೆ, ತಪ್ಪು ಮಾಡಿದ ಮಗನನ್ನು ದಂಡಿಸುವ ತಂದೆಯ ಧ್ವನಿ ಅದು. ಇದೇನಾಗುತ್ತಿದೆ ಅಂದುಕೊಳ್ಳುತ್ತ ಎಚ್ಚರವಾಯಿತು. ಮಗ ನಿದ್ದೆಗಣ್ಣಲ್ಲೇ 'ನೀರು' ಅನ್ನುತ್ತಿದ್ದ ಹಾಗೆ ಕೇಳಿಸಿತು. ತಾಮ್ರದ ತಂಬಿಗೆಯಲ್ಲಿ ಬಿಸಿನೀರು ಇಟ್ಟುಕೊಂಡೇ ಮಲಗಿದ್ದೆ. ಹೋಗಿ ಕುಡಿಸಿದೆ. ಮಲಗಿದ. ಇನ್ನೂ ಮೈ ಬಿಸಿಯಾಗಿಯೇ ಇತ್ತು.

ಸೂರ್ಯ ಹುಟ್ಟುವ ಹೊತ್ತಿಗೆ ಮಗ ಸ್ವಲ್ಪ ಗೆಲುವಾದ. ಕಣ್ಣು ಬಿಟ್ಟು ನೋಡಿದ. ನಕ್ಕ. 'ನನ್ನ ಜ್ವರ ಇಳಿದಿರಬೇಕು' ಎಂದ. ಮೈ ಮುಟ್ಟಿ ನೋಡಿದೆ. ನಿನ್ನೆಯಷ್ಟು ಬಿಸಿ ಇರಲಿಲ್ಲ. 'ಈಗ ಸ್ವಲ್ಪ ಹಾಲು ಕುಡಿ. ಸ್ವಲ್ಪ ಹೊತ್ತು ಬಿಟ್ಟು ಥರ್ಮಾಮೀಟರ್ ಇಟ್ಟು ನೋಡೋಣ' ಎಂದೆ. ಮಗ ಎದ್ದು ಮಾತಾಡುತ್ತಿದ್ದುದನ್ನು ಕಂಡು ಇವಳೂ ಗೆಲುವಾದಳು. ಮೈಸೂರಿಗೆ ಹೋಗಿದ್ದ ಡಾಕ್ಟರು ವಾಪಸು